ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಒಂದಂಕಿ ಲಾಟರಿಯನ್ನು ಮಾಡುತ್ತಿದ್ದವರನ್ನು ಸುಮಾರು ಹತ್ತು ಬಾರಿಯೇ ಅರೆಸ್ಟ್ ಮಾಡಿದ್ದಾರೆ. ಪೋಲಿಸ್‌ನವರು ಅರೆಸ್ಟ್ ಮಾಡಿದಾಗ ಸ್ವಲ್ಪ ದಂಡ ಹಾಕಿ ಅವರನ್ನು ಬಿಟ್ಟುಬಿಡುತ್ತಾರೆ. ಬಿಡುಗಡೆಯಾಗಿ ಮತ್ತೆ ಅದೇ ದಂಧೆಯನ್ನು ಮುಂದುವರಿಸುವ ವ್ಯಕ್ತಿಗಳ ಬಗ್ಗೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳದಿದ್ದರೆ ಇಂದು ಬಡತನ ರೇಖೆಯಲ್ಲಿರುವ ಜನರು ಇದರಿಂದಾಗಿ ಸರ್ವನಾಶವಾಗಿಬಿಡುತ್ತಾರೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಶ್ರೀರಾಮರೆಡ್ಡಿ ಮತ್ತು ಪುಟ್ಟಣ್ಣಯ್ಯನವರು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದು ಗಂಭೀರವಾದ ವಿಷಯವೇ ಆಗಿದೆ. ನಾನು ಅದಕ್ಕೆ ಸಂಬಂಧಪಟ್ಟಂತೆ ಸುದೀರ್ಘವಾದ ಹೇಳಿಕೆಯನ್ನು ಕೊಡುವುದಕ್ಕೆ ಗೃಹ ಮಂತ್ರಿಗಳಿಗೆ ಹೇಳುತ್ತೇನೆ. ಇದನ್ನು ನಾಳೆಯೇ ಕೊಡುವುದಕ್ಕೆ ಹೇಳುತ್ತೇನೆ. ಏಕೆಂದರೆ ಇದರಿಂದಾಗಿ ಅನೇಕ ಯುವಕರು ಬಲಿಯಾಗುತ್ತಿದ್ದಾರಲ್ಲದೇ ಇದು ಬೆಂಗಳೂರಿನಲ್ಲಿ ಮಾತ್ರವಲ್ಲದೇ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತಿದೆ. ನಾಳೆಯೇ ಸಂಬಂಧಪಟ್ಟ ಮಂತ್ರಿಗಳಿಂದ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾನು ಒಂದು ಮುಖ್ಯವಾದ ಅಂಶವನ್ನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ ಬೆಂಗಳೂರಿನಲ್ಲಿ ವೇಣುಗೋಪಾಲ್ ಶೆಟ್ಟಿ, ರಾಜ್ ಕುಮಾರ್ ಪೈ ಮತ್ತು ಆರ್.ಪಿ. ಸುರಾನ ಎಂಬ ಮೂವರು ವ್ಯಕ್ತಿಗಳು ಇಡೀ ರಾಜ್ಯದಲ್ಲಿ ಈ ಒಂದಂಕಿ ಲಾಟರಿಯನ್ನು ಬೇರೆ ಸ್ವರೂಪದಲ್ಲಿ ನಡೆಸುತ್ತಿದ್ದಾರೆ. ಇವರ ಸ್ಕೀಂ ಪ್ರಕಾರ ನಾನು 8 ಕಡೆ ಲಾಟರಿ ದಂಧೆಯನ್ನು ನಡೆಸಿದರೆ ನನಗೆ ಒಂದು ಮೊಬೈಲ್ ಕೊಡುತ್ತಾರೆ, ನಿಜವಾಗಿ ಲಾಟರಿ ಅರುಣಾಚಲಪ್ರದೇಶದಲ್ಲಿ ನಡೆಯಬೇಕು, ಆದರೆ ಅದು ಅಲ್ಲಿ ನಡೆಯುವುದಿಲ್ಲ, ಆದರೆ ಈ ಮೂವರುಗಳೇ ಒಂದು ರೂಮಿನಲ್ಲಿ ಕುಳಿತುಕೊಂಡು ಅರುಣಾಚಲಪ್ರದೇಶದಿಂದ ಲಾಟರಿ ಬಂದಿತು ಎಂಬಂತೆ ಫಲಿತಾಂಶವನ್ನು ಪ್ರಕಟಿಸುತ್ತಿದ್ದಾರೆ. ಇವರು ಈ ರೀತಿ ಮಾಡಿ ಕಾನೂನಿನ ಕಣ್ಣಿಗೆ ಮಣ್ಣೆರಚಿ ವಿರಾಜಿಸುತ್ತಿದ್ದಾರೆ. ಇಂದು ಈ ಲಾಟರಿ ಮಾಫಿಯಾ ಗ್ಯಾಂಗ್ ಏನಿದೆ ಇದರ ವಿರುದ್ಧವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ. ಮಂಜುನಾಥ್ :— ನಾಳೆ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

ಜ) ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವ

ಬಗ್ಗೆ ನಾನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಕಳೆದ ವರ್ಷಕೂಡ ಕೇಳಿದಾಗ ಏಪ್ರಿಲ್ ಒಳಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಹೇಳಿದ್ದರು. ಈಗಾಗಲೇ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೈಪ್‌ಲೈನ್ ಕೂಡ ಅಲ್ಲಿ ಬಂದು ಬಿದ್ದಿದೆ. 3 ಕೋಟಿ 64 ಲಕ್ಷ ರೂಪಾಯಿಗಳ ಪೈಪ್‌ಲೈನ್‌ಗಳನ್ನು ಈಗ ಹಾಕುವುದಕ್ಕೆ ತರಿಸಿದ್ದಾರೆ. ಆದರೆ ಅಲ್ಲಿ ಜಲ ಶುದ್ಧೀಕರಣ ಘಟಕವನ್ನು ಕಟ್ಟಬೇಕಾಗಿದೆ. ಇದರ ಬಗ್ಗೆ ಈಗಾಗಲೇ ಲೋಯೆಸ್ಟ್ ಟೆಂಡರ್ ಕೂಡ ಬಂದಿದೆಯೆಂದು ಹೇಳಿದ್ದಾರೆ. ಅಲ್ಲಿ ಜಲ ಶುದ್ಧೀಕರಣ ಘಟಕವಾದರೆ ಇನ್ನು ಎರಡೂರು ತಿಂಗಳಲ್ಲಿ ನೀರನ್ನು ಬಿಡುವುದಕ್ಕೆ ಸಾಧ್ಯವಾಗುತ್ತದೆಯಾದ ಕಾರಣ ಜಲ ಶುದ್ಧೀಕರಣ ಘಟಕವನ್ನು ಮೊದಲು ಕಟ್ಟಬೇಕು. ಏಕೆಂದರೆ ಇಂದು ಸವಣೂರಿನಲ್ಲಿ ಒಂದು ತಿಂಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಣ್ಣು ಮಕ್ಕಳು ಮತ್ತು ಸಾರ್ವಜನಿಕರು ಬೀದಿಗೆ ಇಳಿದಿದ್ದಾರೆ. ಆದುದರಿಂದ ಲೋಯೆಸ್ಟ್ ಟೆಂಡರ್ ಯಾರು ಹಾಕಿದ್ದಾರೋ ಅವರಿಗೆ ಅಥವಾ ಯಾರಿಗಾದರೂ ಕೆಲಸಕೊಟ್ಟು ಜಲ ಶುದ್ಧೀಕರಣ ಘಟಕವನ್ನು ಸರ್ಕಾರ ಬೇಗ ಕಟ್ಟಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ :— ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಎಂ.ಎಸ್. ಪಾಟೀಲರ ಗಮನಕ್ಕೆ ತಂದು ಅಲ್ಲಿ ಶೀಘ್ರದಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

(ಓ) ವಿಟ್ಲ ಕ್ಷೇತ್ರದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಶನ್ ತೆರೆಯುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಬಿ.ಸಿ. ರೋಡ್ ಅಭಿವೃದ್ಧಿ ಹೊಂದುತ್ತಿದೆ. ರಾಷ್ಟ್ರೀಯ ಹೆದ್ದಾರಿ 48 ಇದರ ಮಧ್ಯೆಯಲ್ಲಿ ಹಾದುಹೋಗುತ್ತಿದೆ. ತಾಲ್ಲೂಕಿನ ಹಲವಾರು ಗ್ರಾಮಗಳು ಇದಕ್ಕೆ ಸಂಪರ್ಕ ಹೊಂದಿರುವುದರಿಂದ ಜನಸಂಚಾರ ಮತ್ತು ವಾಹನ ಸಂಚಾರ ಜಾಸ್ತಿಯಾಗುತ್ತಿದೆ. ಈಗಿರುವ ಅಲ್ಲಿಯ ಪೋಲಿಸ್ ಠಾಣೆಯ ಪೋಲಿಸರಿಗೆ ಟ್ರಾಫಿಕ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಠಾಣೆ ಬೇಕು ಎಂದು ವರದಿಯನ್ನೂ ಕೂಡ ಕಳುಹಿಸಲಾಗಿದೆ. ರೋಟರಿಯವರು ನಡೆಸಿದ ಅದಾಲತ್‌ನಲ್ಲಿ ಕೂಡ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಸ್ಟೇಶನ್ ಬೇಕೆಂದು ಮನವಿಯನ್ನೂ ಕೂಡ ಕೊಡಲಾಗಿದೆ. ಆದುದರಿಂದ ಬಿ.ಸಿ. ರೋಡ್‌ಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಶನ್ ಮಂಜೂರು ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಗೃಹ ಸಚಿವರಿಗೆ ಸದರಿ ವಿಷಯವನ್ನು ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸುವುದಕ್ಕೆ ನಾನು ವಿರ್ಪಾಡು ಮಾಡುತ್ತೇನೆ.